**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ, ನವಲಗುಂದ.**

| | |
|---|---|
| ಸಿ.ಸಿ. ನಂಬರ್ | : 102/2024 |
| ಸಿ.ಡಬ್ಲೂ | : 06 |
| ಪಿ.ಡಬ್ಲೂ | : 04 |
| ಸಾಕ್ಷಿಯ ಹೆಸರು | : ಹನಮರಡ್ಡಿ ಯಲ್ಲರಡ್ಡಿ ನೀಲಗುಂದ |
| ವಯಸ್ಸು | : 70 ವರ್ಷ |
| ಉದ್ಯೋಗ | : ಒಕ್ಕಲುತನ |
| ವಾಸ ಸ್ಥಳ | : ಕರ್ಲವಾಡ. |

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 20.06.2026.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಪ್ರಕರಣದ ಆರೋಪಿತರ ಪರಿಚಯವಿದೆ. ಚಾಸಾ-1 ರವರು ನನ್ನ ಹೆಂಡತಿ. ಚಾಸಾ-4 ನನ್ನ ಮಗ. ಚಾಸಾ-5 ನನ್ನ ಸೊಸೆ. ಚಾಸಾ-7 ಮತ್ತು 8 ರವರ ಪರಿಚಯ ಇದೆ.

ದಿನಾಂಕಃ 10-07-2021 ರಂದು ಬೆ.10.00 ಗಂಟೆಗೆ ಕರ್ಲವಾಡ ಗ್ರಾಮದ ನಮ್ಮ ಮನೆಯ ಮುಂದೆ ಮುಸರಿ ಚೆಲ್ಲುವ ವಿಷಯ ಸಂಬಂಧಿಸಿ ನಮಗೂ ಮತ್ತು ಆರೋಪಿತರಿಗೂ ಜಗಳವಾಗಿರುತ್ತದೆ. 1 ನೇ ಆರೋಪಿ ಚಾಸಾ-1 ರವರಿಗೆ ಕೈಯಿಂದ ಹೊಡೆದಿರುತ್ತಾನೆ. 1 ಆರೋಪಿ ಚಾಸಾ-1 ರವರಿಗೆ ರಂಡಿ ಎಂದು ಅವಾಚ್ಯವಾಗಿ ಬೈದಿರುತ್ತಾರೆ. ಆಗ ಜಗಳ ಬಿಡಿಸಲು ಬಂದ ಚಾಸಾ-5 ರವರಿಗೆ ಆರೋಪಿತರು ತಲ್ಲಾಡಿರುತ್ತಾರೆ. ನಂತರ ನಾನು ಜಗಳ ಬಿಡಿಸಿರುತ್ತೇನೆ. ಪ್ರಕರಣಕ್ಕೆ ಸಂಬಂದಿಸಿ ನಾನು ಪೋಲಿಸರಿಗೆ ಹೇಳಿಕೆಗಳನ್ನು ನೀಡಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ- ಮಾನ್ಯ ಸ.ಸ.ಅ. ರವರಿಂದಃ**

ದಿಃ 10.07.2021 ರಂದು ಬೆ.09.00 ಗಂಟೆಗೆ ಚಾಸಾ-1 ರವರು ನಮ್ಮ

ಮನೆಯ ಹಿತ್ತಲಲ್ಲಿ ಮುಸುರಿ ಚೆಲ್ಲಿದ್ದರ ಸಿಟ್ಟಿನಿಂದ ಆರೋಪಿತರು ಅಕ್ರಮಕೂಟವನ್ನು ರಚಿಸಿಕೊಂಡು ಬಂದು 1 ನೇ ಆರೋಪಿ ಚಾಸಾ-1 ರವರಿಗೆ ಭೋಸಡಿ ಎಂದು ಅವಾಚ್ಯವಾಗಿ ಬೈದಿರುತ್ತಾರೆ ಎಂದರೆ ಸರಿ. ಅದನ್ನು ಪ್ರಶ್ನಿಸಿದ ಚಾಸಾ-4 ರವರಿಗೆ 2 ಮತ್ತು 3 ನೇ ಆರೋಪಿತರು ಹೊಡೆಬಡೆ ಮಾಡಿದ್ದು, 3 ನೇ ಆರೋಪಿ ಬಡಿಗೆಯಿಂದ ಆತನ ದುಬ್ಬಕ್ಕೆ ಹೊಡೆದಿದ್ದು, 2 ನೇ ಆರೋಪಿ ಕೈಯಿಂದ ಆತನ ಕಪಾಳಕ್ಕೆ ಹಾಗೂ ತಲೆಗೆ ಹೊಡೆದು ಸಾದಾ ಗಾಯಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿತರೆಲ್ಲರೂ ನಮಗೆ ಜೀವದ ಬೆದರಿಕೆ ಹಾಕಿರುತ್ತಾನೆಂದರೆ ಸರಿಯಲ್ಲ. ಸದರಿ ಅಲ್ಲಗೆಳೆದ ಭಾಗವನ್ನು **ನಿಪಿ-4** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ- ಆರೋಪಿತರ ಪರ ಶ್ರೀ ಕೆ ಆರ್ ಎಂ ವಕೀಲರಿಂದಃ</u>**

ನನ್ನ ಹೆಂಡತಿ ಆರೋಪಿತರ ವಿರುದ್ಧ ಜಮೀನಿಗೆ ಸಂಬಂಧಿಸಿ ಸಿವಿಲ್ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಘಟನೆ ನಡೆದಾಗ ನಾನು ಘಟನಾ ಸ್ಥಳದಲ್ಲಿ ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಸಂಬಂಧಿಸಿ ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಸದರಿ ಸಿವಿಲ್ ದಾವೆ ಇರುವ ಕಾರಣ ನಾವು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಘಟನೆ ನಡೆದ ದಿನ ದೂರು ಸಲ್ಲಿಸಲಾಗಿರುತ್ತದೆ. ಆರೋಪಿತರು ನನಗೆ ಅವಾಚ್ಯವಾಗಿ ಬೈದಿರುತ್ತಾರೆ, ಹೊಡೆಬಡೆ ಮಾಡಿರುತ್ತಾರೆ, ಜೀವದ ಬೆದರಿಕೆ ಹಾಕಿರುತ್ತಾರೆ, ಅವಮಾನ ಪಡಿಸಿರುತ್ತಾರೆ ಹಾಗೂ ಕೆಳಗೆ ಬಿಳಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**